**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ**

**ಸಿ.ಸಿ.ನಂ.1/2021**

ಅಸಾಃ 1 (ಚಾಸಾ-1)

| | |
|---|---|
| ಹೆಸರು | ಕಲ್ಲಪ್ಪ ಬದ್ದೂರ |
| ತಂದೆಯ /ಗಂಡನ ಹೆಸರು | ಭೀಮಪ್ಪ |
| ವಯಸ್ಸು | 70 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಮಹಾಲಿಂಗಪೂರ |

ದಿನಾಂಕ 12-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-**

ಚಾಸಾ-7 ನನ್ನ ಮಗ. ನನಗೆ ಚಾಸಾ-2 ರಿಂದ 6, 8 ರಿಂದ 12 ರವರ ಪರಿಚಯ ಇದೆ. ಆರೋಪಿಯನ್ನು ನಾನು ಅಪಘಾತವಾದ ಸ್ಥಳದಲ್ಲಿ ನೋಡಿದ್ದೇನೆ. ದಿನಾಂಕ 01-09-2020 ರಂದು ರಾತ್ರಿ 8 ಗಂಟೆಗೆ ನಾನು ಮಹಾಲಿಂಗಪೂರದ ತೋಟದಲ್ಲಿ ಇದ್ದಾಗ, ಚಾಸಾ-8 ರವರು ನನಗೆ ಫೋನ್ ಮಾಡಿ ನನ್ನ ಮಗನಾದ ಚಾಸಾ-7 ರವರಿಗೆ ಚಿಮ್ಮಡ-ಮಹಾಲಿಂಗಪೂರ ರಸ್ತೆಯಲ್ಲಿ ಅಪಘಾತವಾಗಿದೆ ಎಂದು ಹೇಳಿದ್ದರು. ಆಗ ನಾನು ಚಾಸಾ-9 ರವರೊಂದಿಗೆ ಅಲ್ಲಿಗೆ ಹೋಗಿ ನೋಡಿದಾಗ, ನನ್ನ ಮಗನಿಗೆ ಅಪಘಾತವಾಗಿ ರಸ್ತೆಯ ಎಡಬದಿ ಬಿದ್ದಿದ್ದನು. ಅವನ ಕಾಲಿಗೆ, ಕೈಗೆ, ಬಲಭಾಗದ ತಲೆಗೆ ಪೆಟ್ಟಾಗಿತ್ತು. ಅಲ್ಲಿ ಒಂದು ಕೆಂಪು ಬಣ್ಣದ ಡಿಲಕ್ಸ ವಾಹನ ಇತ್ತು. ಅದನ್ನು ವಿಶಾಲ ಸರ್ವದೆ(ಆರೋಪಿ) ಚಲಾಯಿಸುತ್ತಿದ್ದರು ಎಂದು ಗೊತ್ತಾಯಿತು. ಸದರಿ ವ್ಯಕ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು ಆತನನ್ನು ನೋಡಿಲ್ಲ. ನಂತರ ನನ್ನ ಮಗನನ್ನು ಗೋಕಾಕದ ಉಮರಾಣಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಮರುದಿನ ಬನಹಟ್ಟಿಯ ಪೋಲಿಸ್ ಠಾಣೆಯಲ್ಲಿ ದೂರನ್ನು ನಾನೇ ಸಲ್ಲಿಸಿದ್ದು, ಪೋಲಿಸರಿಗೆ ಹೇಳಿ ಬರೆಸಿದ್ದೇನೆ. ನನ್ನ ಮಗ ಮೋಟಾರ ಬೈಕ್ ಮೇಲೆ ಚಿಮ್ಮಡದಿಂದ ಮಹಾಲಿಂಗಪೂರಕ್ಕೆ ಹೋಗುತ್ತಿದ್ದಾಗ ಅಪಘಾತವಾಗಿರುತ್ತದೆ. ನಾನು ಪೋಲಿಸರ ಮುಂದೆ ಯಾವುದೇ ಪುರವಣಿ ಹೇಳಿಕೆ ಕೊಟ್ಟಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆ ಫಿರ್ಯಾದಿಯಾಗಿದ್ದು, ಅದನ್ನು ನಿಪಿ-1 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ:-**

ದಿನಾಂಕ 01-09-2020 ರಂದು ಮ.2 ಗಂಟೆ ಸುಮಾರಿಗೆ ನನ್ನ ಮಗ ತನ್ನ ಸ್ನೇಹಿತನ ಮೋಟಾರ ಸೈಕಲ್ ನಂ.ಕೆಎ-25 ಇಎ-2629 ಇದರ ಮೇಲೆ ತನ್ನ ಹೆಂಡತಿಯ ಊರಾದ ಚಿಮ್ಮಡಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋಗಿದ್ದು, ಚಿಮ್ಮಡದ ದೊಡ್ಡ ಕೆನಾಲ್ ಹತ್ತಿರ ಆತನಿಗೆ ಅಪಘಾತವಾಗಿದೆ ಎಂದು ರಾತ್ರಿ 8-45 ಗಂಟೆಗೆ ಚಾಸಾ-8 ರವರು ನನಗೆ ಫೋನ್ ಮಾಡಿ ಬೇಗ ಬನ್ನಿ ಎಂದು ಹೇಳಿದರು ಮತ್ತು ನಾನು ಚಾಸಾ-9 ರವರೊಂದಿಗೆ ಹೋಗಿ ನೋಡಿದಾಗ ನನ್ನ ಮಗನ ಬಲಗಾಲ ಮೊಣಕಾಲ ಹತ್ತಿರ ಭಾರೀ ಗಾಯವಾಗಿ ರಕ್ತ ಬರುತ್ತಿತ್ತು ಮತ್ತು ಎಡಗಡೆ ಹಣೆಗೆ ಮತ್ತು ಎಡಕಿವಿಯ ಹತ್ತಿರ ಗಾಯವಾಗಿ ರಕ್ತ ಬರುತ್ತಿತ್ತು. ಸ್ಥಳದಲ್ಲಿ ನನ್ನ ಮಗನ ಮೋಟಾರ ಸೈಕಲಗೆ ಅಪಘಾತಪಡಿಸಿದ ಆರೋಪಿ ತನ್ನ ಮೋಟಾರ ಸೈಕಲ್ ಸಮೇತ ಇದ್ದನು. ಆತನೇ ಈಗ ನ್ಯಾಯಾಲಯದ ಮುಂದೆ ಇದ್ದಾನೆಂದರೆ ಸರಿ. ಆರೋಪಿ ಚಲಾಯಿಸುತ್ತಿದ್ದ ಮೋಟಾರ ಸೈಕಲ್ ನಂ.ಕೆಎ-27 ಇಎ-6752 ಎಂದು ಇದ್ದು, ಆತ ತನ್ನ ಮೋಟಾರ ಸೈಕಲನ್ನು ಅತೀ ಜೋರಾಗಿ ಚಲಾಯಿಸಿಕೊಂಡು ಬರುತ್ತಿದ್ದಾಗ, ತನ್ನ ಸೈಡನಲ್ಲಿ ಮೋಟಾರ ಬೈಕ ಮೇಲೆ ಹೊರಟಿದ್ದ ನನ್ನ ಮಗನಿಗೆ ಹಾಯಿಸಿ ಅಪಘಾತಪಡಿಸಿದರು. ಈ ವಿಷಯವನ್ನು ಚಾಸಾ-8 ರವರು ನನಗೆ ತಿಳಿಸಿದ್ದು, ನಿಪಿ-1 ನ್ನು ನಾನು ಚಾಸಾ-10 ರವರ ಮುಖಾಂತರ ಬರೆಸಿದ್ದೇನೆಂದರೆ ಸರಿ. ಮರುದಿನ ನನ್ನ ಮಗನ ವಾಹನದ ನಂಬರ್ ಕುರಿತು ಪೋಲಿಸರಿಗೆ ಪುರವಣಿ ಹೇಳಿಕೆ ನೀಡಿದ್ದೇನೆಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ಎಚ್ ಕೆ ವಕೀಲರಿಂದ:-**

ನಿಪಿ-1 ಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಚಾಸಾ-8 ರವರ ಮುಖಾಂತರ ಅದನ್ನು ಬರೆಸಿದ್ದೇನೆಂದರೆ ಸರಿಯಲ್ಲ. ನಿಪಿ-1 ರಲ್ಲಿ ಆರೋಪಿಯ ಹೆಸರನ್ನು ಹೇಳಿ ಬರೆಸಿದ್ದೇನೆ. ದಿನಾಂಕ 01-09-2020 ರಂದು ನನ್ನ ಮಗನಿಗೆ ಆರೋಪಿ ಅಪಘಾತಪಡಿಸಿದ್ದಾನೆಂದು ನನಗೆ ಫೋನ್ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲದೇ ಇದ್ದರೂ ಚಾಸಾ-8 ರವರ ಮಾತು ಕೇಳಿ ಮತ್ತು ಉಳಿದ ಸಾಕ್ಷಿದಾರರು ನನಗೆ ಬೇಕಾದವರು ಇದ್ದ ಕಾರಣ ಅವರ

ಪಿ.ಡಬ್ಲ್ಯು: 1

ಮಾತು ಕೇಳಿ ಸುಳ್ಳು ದೂರನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ನನ್ನ ಮಗನಿಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಫಿರ್ಯಾದಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ.